# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ | KANNADA POST | ಇದು ಸುದ್ದಿ ವಿಲಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 221 | Pages. 2 | Date: 13-08-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 221 - ಪುಟಗಳು : 2 | 13-08-2026 ಗುರುವಾರ | Ph: 8762954248 | ದರ : ₹1


## ನುಗ್ಗೇಹಳ್ಳಿ ಹೆಚ್‌ಡಿಸಿಸಿ ಬ್ಯಾಂಕ್ ಶಾಖೆಯಲ್ಲಿ ಅವ್ಯವಹಾರ

### 1 ಕೋಟಿ ರೂ. ಲಪಟಾಯಿಸಿದ ಮಹಿಳಾ ಸಿಬ್ಬಂದಿ | ರೈತ ಸಂಘದಿಂದ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ನುಗ್ಗೇಹಳ್ಳಿ ಹೆಚ್‌ಡಿಸಿಸಿ ಬ್ಯಾಂಕ್ ಶಾಖೆಯಲ್ಲಿ ಅಂದಾಜು 1 ಕೋಟಿ ರೂ. ಹಣವನ್ನು ಇಬ್ಬರು ಮಹಿಳಾ ಸಿಬ್ಬಂದಿ ಲಪಟಾಯಿಸಿರುವ ಪ್ರಕರಣ ಬೆಳಕಿಗೆ ಬಂದಿದೆ.

ಪ್ರಕರಣ ಖಂಡಿಸಿ ಬುಧವಾರ ಕರ್ನಾಟಕ ರಾಜ್ಯ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಅನೇಕ ವರ್ಷಗಳಿಂದ ಬ್ಯಾಂಕ್‌ನಲ್ಲಿ ಸ್ತ್ರೀ ಶಕ್ತಿ ಸಂಘ, ಸ್ವಸಹಾಯ ಸಂಘ, ಒಡವೆ ಸಾಲ, ರಾಗಿ ಸಹಾಯಧನ, ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಸಾಲ ಪಡೆದಿರುವ ರೈತರ ಸಹಾಯಧನ ಸೇರಿ ವಿವಿಧ ಖಾತೆಗಳಲ್ಲಿ ಸುಮಾರು 1 ಕೋಟಿ ರೂ. ಬ್ಯಾಂಕ್‌ನ ಇಬ್ಬರು ಮಹಿಳಾ ಸಿಬ್ಬಂದಿ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು.

ತಾಲ್ಲೂಕು ರೈತ ಸಂಘದ ಅಧ್ಯಕ್ಷ ರಾಮಚಂದ್ರ, ಮಾತನಾಡಿ, ಬ್ಯಾಂಕ್‌ನಲ್ಲೇ ಈ ರೀತಿ ಅವ್ಯವಹಾರ ನಡೆದರೆ ಯಾರನ್ನು ನಂಬಬೇಕು. ಈ ಬಗ್ಗೆ ಜಿಲ್ಲಾ ಬ್ಯಾಂಕ್‌ನ ಅಧಿಕಾರಿಗಳು ಸೂಕ್ತ ತನಿಖೆ ನಡೆಸಿ ತಪ್ಪಿಸಸ್ಥರಿಗೆ



ಶಿಕ್ಷೆ ವಿಧಿಸುವುದರ ಜೊತೆಗೆ ನೊಂದವರಿಗೆ ನ್ಯಾಯ ದೊರಕಿಸಬೇಕು ಎಂದು ಆಗ್ರಹಿಸಿದರು.

ಗ್ರಾಹಕರು ಆಭರಣ ಸಾಲ ಪಡೆದಿದ್ದಾರೆ. ಆದರೆ ಸಾಲದ ಚೀಟಿ ಇಲ್ಲ ಎಂದು ಒಡವೆ ಕೊಡಲು ನಿರಾಕರಿಸಿರುವ ಪ್ರಕರಣಗಳಿವೆ. ಇನ್ನೂ ಹೆಚ್ಚಿನ ಬಡ್ಡಿ ಪಡೆದಿರುವ ಬಗ್ಗೆಯು ದೂರುಗಳು ಬಂದಿವೆ. ಈ ಬಗ್ಗೆ ಹಿರಿಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಜಿಲ್ಲಾ ಬ್ಯಾಂಕ್ ನಿರ್ದೇಶಕ ಸಿ.ಎನ್.ಬಾಲಕೃಷ್ಣ ಅವರು ಈ ವಿಚಾರದಲ್ಲಿ ಮೌನವಾಗಿರುವುದು ಖಂಡನೀಯ ಎಂದರು.

ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾ ಸಹಕಾರ ಬ್ಯಾಂಕ್ ಉಪ ವ್ಯವಸ್ಥಾಪಕ ವೆಂಕಟೇಶ್, ಸ್ವಸಹಾಯ ಸಂಘಗಳ ವಿಭಾಗದ ಹಿರಿಯ ವ್ಯವಸ್ಥಾಪಕ ಜಗದೀಶ್, ಸಹಾಯಕ ವ್ಯವಸ್ಥಾಪಕ ಗುರು ಭೇಟಿ ನೀಡಿ ಮಾಹಿತಿ ಪಡೆದರು.

ಪ್ರತಿಭಟನಾ ನಿರತ ರೈತರು ಬ್ಯಾಂಕ್ ವ್ಯವಸ್ಥಾಪಕರ ವಿರುದ್ಧ ಧಿಕ್ಕಾರ ಕೂಗಿದರು. ತಪ್ಪಿತಸ್ಥರ ವಿರುದ್ಧ ತಕ್ಷಣ ಕ್ರಮ ಜರುಗಿಸಬೇಕು ಹಾಗೂ ಸಮಗ್ರ ತನಿಖೆ ನಡೆಸಬೇಕೆಂದು ಪಟ್ಟು ಹಿಡಿದರು. ಈ ವೇಳೆ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಪ್ರತಿಭಟನಾಕಾರರ ಸಮಾಧಾನಪಡಿಸಲು ಪೊಲೀಸರು ಹರಸಾಹಸಪಡಬೇಕಾಯಿತು.

ತಾಲ್ಲೂಕು ವೀರಶೈವ ಸಮಾಜದ ಅಧ್ಯಕ್ಷ ರಾಜಣ್ಣ, ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹಿರೀಸಾವೆ ರಘು, ಕಾರ್ಯಧ್ಯಕ್ಷ ಎಂ.ಎಲ್. ಹರೀಶ್, ರೈತ ಸಂಘದ ಪ್ರಮುಖರಾದ ನಾಗರತ್ನಮ್ಮ, ಸೋಮಶೇಖರಯ್ಯ, ಕುಮಾರ್, ಕೋವಿ ಬಾಬು, ಹಿರೀಸಾವೆ ಅಣ್ಣಪ್ಪ ಸ್ವಾಮಿ, ಮಂಜೇಗೌಡ, ಪ್ರಕಾಶ್, ಹೆಚ್.ಎಂ.ಜಯರಾಮ್ ಇತರರಿದ್ದರು.

### ತಪ್ಪಿತಸ್ಥರಿಂದಲೇ ಹಣ ವಸೂಲು

ಬ್ಯಾಂಕ್ ಶಾಖಾ ವ್ಯವಸ್ಥಾಪಕ ಬಾಬು ಮಾತನಾಡಿ, ಬ್ಯಾಂಕ್‌ನ ಇಬ್ಬರು ಮಹಿಳಾ ಸಿಬ್ಬಂದಿ ನಿಷ್ಕ್ರಿಯ ಖಾತೆಗಳನ್ನು ಬಳಸಿ ಸುಮಾರು 80 ಲಕ್ಷ ರೂ. ವರ್ಗಾವಣೆ ಮಾಡಿಕೊಂಡಿದ್ದಾರೆ. ಮೂರು ತಿಂಗಳ ಹಿಂದೆ ಆಡಿಟ್ ವೇಳೆ ಅನುಮಾನ ಬಂದ ಹಿನ್ನಲೆಯಲ್ಲಿ ತನಿಖೆ ನಡೆಸಿ ಹಣ ವರ್ಗಾವಣೆ ಆಗಿರುವ ಬಗ್ಗೆ ಪತ್ತೆ ಹಚ್ಚಲಾಯಿತು. ಸದ್ಯ ದುರುಪಯೋಗ ಆಗಿರುವ ಹಣವನ್ನು ಆ ಸಿಬ್ಬಂದಿಯಿಂದಲೇ ಕಟ್ಟಿಸಲಾಗಿದೆ. ಜೊತೆಗೆ ಇಬ್ಬರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ ಎಂದರು.

## ಹಸಿರು ಹಾಸನ: ಇಂದು ಗಿಡ ನೆಡುವ ಅಭಿಯಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪರಿಸರ ಸಂರಕ್ಷಣೆ ಹಾಗೂ ಹಸಿರು ಹಾಸನ ನಿರ್ಮಾಣ ಉದ್ದೇಶದಿಂದ ನಮ್ಮ ಹಾಸನ ಟಿ.ವಿ. ವತಿಯಿಂದ ಜಿಲ್ಲಾ ಆಡಳಿತ ಮತ್ತು ಹಾಸನ ಮಹಾನಗರ ಪಾಲಿಕೆ ಸಹಕಾರದೊಂದಿಗೆ ಆ.13ರಂದು ನಗರದ ವಿವಿಧೆಡೆ 1,000 ಹೂ ಹಾಗೂ ಹಣ್ಣಿನ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಟಿವಿ ಸಂಸ್ಥಾಪಕ ತೌಫಿಕ್ ಅಹಮದ್ ಹಾಗೂ ಪತಂಜಲಿ ಯೋಗ ಸಮಿತಿ ಜಿಲ್ಲಾ ಮಾಧ್ಯಮ ಪ್ರಭಾರಿ ಪಿ.ಎ. ಶ್ರೀನಿವಾಸ್ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜನಪದ ಜಂಗಮ ಎಸ್.ಕೆ. ಕರೀಂಖಾನ್ ಹಾಗೂ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ಪರಿಸರ ಸೇವೆ ಸ್ಮರಿಸುವ ಉದ್ದೇಶದಿಂದ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಪರಿಸರಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗಿಡ ನೆಡುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಪ್ರಸ್ತುತ ತಂತ್ರಜ್ಞಾನ ವೇಗವಾಗಿ ಅಭಿವೃದ್ಧಿಯಾಗುತ್ತಿದ್ದು, ಮೊಬೈಲ್, ಯೂಟ್ಯೂಬ್, ಫೇಸ್‌ಬುಕ್ ಸೇರಿ ವಿವಿಧ ಆ್ಯಪ್‌ಗಳಲ್ಲಿ ಮಕ್ಕಳು ಹಾಗೂ ಜನರು ಹೆಚ್ಚಿನ ಸಮಯ ಕಳೆಯುತ್ತಿದ್ದಾರೆ. ಇದರಿಂದ ಪ್ರಕೃತಿ ಮತ್ತು ಪರಿಸರದ ಮೇಲಿನ ಕಾಳಜಿ ಕ್ರಮೇಣ ಕಡಿಮೆಯಾಗುತ್ತಿದೆ. ಮಕ್ಕಳು




ಶಾಲೆಯಿಂದ ಮನೆಗೆ ಬಂದ ನಂತರ ಮೊಬೈಲ್‌ನಲ್ಲೇ ಹೆಚ್ಚು ಸಮಯ ಕಳೆಯುವ ಬದಲು ಪರಿಸರ ಸಂರಕ್ಷಣೆ, ಗಿಡ ನೆಡುವಿಕೆ ಹಾಗೂ ಪ್ರಕೃತಿಯೊಂದಿಗೆ ಬೆರೆಯಬೇಕು. ಪರಿಸರದ ಬಗ್ಗೆ ನಿರ್ಲಕ್ಷ್ಯ ಮುಂದುವರಿದರೆ ಮುಂದಿನ ದಿನಗಳಲ್ಲಿ ಹವಾಮಾನ ಮತ್ತು ಪ್ರಕೃತಿಯಲ್ಲಿ ಮತ್ತಷ್ಟು ವ್ಯತಿರಿಕ್ತ ಬದಲಾವಣೆಗಳಾಗಿ ಹಲವು ಸಮಸ್ಯೆ ಎದುರಿಸಬೇಕಾಗಬಹುದು ಎಂದು ಎಚ್ಚರಿಸಿದರು.

ಹಾಗಾಗಿ ಮಕ್ಕಳಲ್ಲಿ ಪರಿಸರ ಪ್ರಜ್ಞೆ ಬೆಳೆಸುವ ಅಗತ್ಯವಿದ್ದು, ಎಲ್ಲರಲ್ಲೂ ಅರಿವು ಮೂಡಿಸುವ ಉದ್ದೇಶದಿಂದ ಹಸಿರು ಹಾಸನ ಗಿಡ ನೆಡುವ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡ ನೆಟ್ಟು, ಅದನ್ನು ಪೋಷಿಸುವ ಜವಾಬ್ದಾರಿ ವಹಿಸಿಕೊಳ್ಳಬೇಕೆಂದರು. ಗುರುವಾರ ಗಿಡ ನೆಡುವ ಕಾರ್ಯಕ್ರಮ ಆರಂಭವಾಗಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪರಿಸರ ಸಂರಕ್ಷಣೆ ಸಂಕಲ್ಪದೊಂದಿಗೆ ಅಭಿಯಾನಕ್ಕೆ ಕೈಜೋಡಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಅಕ್ಮಲ್, ಇರ್ಫಾನ್‌ಪಾಷ ಇದ್ದರು.

## ಅಕ್ರಮ ಬಿಲ್ಲೆಟ್ಸ್ ಸಾಗಾಟಕ್ಕೆ ಅರಣ್ಯ ಇಲಾಖೆ ಬ್ರೇಕ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಅಕ್ರಮವಾಗಿ ಸುಮಾರು 15.960 ಘನ ಮೀಟರ್ ಬಿಲ್ಲೆಟ್ಸ್‌ಗಳನ್ನು ಸಾಗಿಸುತ್ತಿದ್ದ ವಾಹನವನ್ನು ಅರಣ್ಯ ಇಲಾಖೆ ಅಧಿಕಾರಿಗಳು ಪತ್ತೆಹಚ್ಚಿ ವಶಕ್ಕೆ ಪಡೆದಿದ್ದಾರೆ.

ಆ.11ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮಾರ್ಗದರ್ಶನದಲ್ಲಿ ಸಕಲೇಶಪುರ ವಲಯದ ಬೆಳಗೋಡು ಶಾಖೆಯ ಈಶ್ವರಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಈ ವೇಳೆ ಅಕ್ರಮವಾಗಿ ಬಿಲ್ಲೆಟ್ಸ್ ಸಾಗಿಸುತ್ತಿದ್ದ ವಾಹನವನ್ನು ವಲಯ ಅರಣ್ಯಾಧಿಕಾರಿ ಎಚ್. ಆರ್. ಹೇಮಂತ್ ಕುಮಾರ್ ಹಾಗೂ ಸಿಬ್ಬಂದಿ ಪತ್ತೆಹಚ್ಚಿ ಇಲಾಖಾ ವಶಕ್ಕೆ ಪಡೆದರು.

ಕಾರ್ಯಾಚರಣೆಯಲ್ಲಿ ಉಪ ವಲಯ ಅರಣ್ಯಾಧಿಕಾರಿಗಳಾದ ಮಂಜುನಾಥ್, ಅರ್ಜುನ್, ಧನಂಜಯ್, ಗಸ್ತು ಅರಣ್ಯ ಪಾಲಕರಾದ ಉಮೇಶ್, ಕುಮಾರ್, ಅರಣ್ಯ ವೀಕ್ಷಕರಾದ ಲೋಕೇಶ್, ಪೃಥ್ವಿರಾಜ್ ಹಾಗೂ ವಾಹನ ಚಾಲಕ ನಿಶಾಂತ್ ಪಾಲ್ಗೊಂಡಿದ್ದರು.

ಅರಣ್ಯ ಸಂಪತ್ತಿನ ಅಕ್ರಮ ಸಾಗಾಟ ತಡೆಗೆ ಅರಣ್ಯ ಇಲಾಖೆ ಅಧಿಕಾರಿಗಳು ನಿರಂತರವಾಗಿ ಗಸ್ತು ಮತ್ತು ತಪಾಸಣಾ ಕಾರ್ಯಾಚರಣೆ ನಡೆಸುತ್ತಿದ್ದಾರೆ.

## ಸಚಿವ ನಾಗೇಂದ್ರ ರಾಜೀನಾಮೆಗೆ ಬಿಜೆಪಿ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಹಣ ಅಕ್ರಮ ವರ್ಗಾವಣೆ ಪ್ರಕರಣದ ಆರೋಪ ಎದುರಿಸುತ್ತಿದ್ದರೂ, ಬಿ.ನಾಗೇಂದ್ರ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿರುವುದನ್ನು ಖಂಡಿಸಿ, ಅವರ ರಾಜೀನಾಮೆಗೆ ಆಗ್ರಹಿಸಿ ಸದನದ ಒಳಗೆ ಮತ್ತು ಹೊರಗೆ ರಾಜ್ಯಾದ್ಯಂತ ಬಿಜೆಪಿ ಹೋರಾಟಕ್ಕೆ ನಿರ್ಧರಿಸಿದೆ.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಸುಮಾರು 187 ಕೋಟಿ ರೂ. ಹಗರಣದ ಆರೋಪದಿಂದ ಇನ್ನೂ ಮುಕ್ತರಾಗದ ನಾಗೇಂದ್ರ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿರುವುದು ಖಂಡನೀಯ. ಅವರ ಮೇಲಿನ ಭಯದಿಂದ ಅಥವಾ ಕಾಂಗ್ರೆಸ್ ಹೈಕಮಾಂಡ್‌ನಿಂದ ಯಾವುದೇ ಒತ್ತಡವಿತ್ತಾ ಎಂದು ಪ್ರಶ್ನಿಸಿದರು.

ಹಣ ಅಕ್ರಮ ಹಂಚಿಕೆ ತನಿಖೆ ಇನ್ನೂ ಮುಗಿದಿಲ್ಲ. ಆದರೂ ಕ್ಲೀನ್ ಚಿಟ್ ಸಿಕ್ಕಿದೆ




ಎಂಬಂತೆ ನಾಗೇಂದ್ರ ಅವರನ್ನು ಮಂತ್ರಿ ಮಾಡಿರುವುದು ಸರಿಯಲ್ಲ. ಪರಿಶಿಷ್ಟ ಪಂಗಡದ ಜನರ ಆರ್ಥಿಕ ಮತ್ತು ಸಾಮಾಜಿಕ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ದುರ್ಬಳಕೆ ಮಾಡಲಾಗಿದೆ. ಅಂಥವರನ್ನೇ ರಕ್ಷಿಸುವ ಕೆಲಸವನ್ನು ಸರ್ಕಾರ ಹಾಗೂ ಸಿಎಂ ಮಾಡುತ್ತಿದ್ದಾರೆ ಎಂದು ಕಿಡಿ ಕಾರಿದರು.

ಆರೋಪ ಎದುರಿಸುತ್ತಿರುವ ವ್ಯಕ್ತಿಯನ್ನೇ ಮತ್ತೆ ಸಚಿವರನ್ನಾಗಿ ಮಾಡಿರುವುದು ಸರ್ಕಾರದ ನಿರ್ಧಾರದ ಮೇಲೆ ಅನುಮಾನ ಮೂಡಿಸಿದೆ, ಸಾರ್ವಜನಿಕರಲ್ಲಿ ತಪ್ಪು ಸಂದೇಶ ರವಾನಿಸುತ್ತದೆ ಎಂದರು.

ಸಿದ್ದರಾಮಯ್ಯ ಅವರೂ ಅಕ್ರಮದ ಬಗ್ಗೆ ಒಪ್ಪಿಕೊಂಡಿದ್ದರು. ತನಿಖೆ ಪೂರ್ಣಗೊಳ್ಳುವ ಮುನ್ನವೇ ನಾಗೇಂದ್ರ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರಿಸಿರುವುದು ಅರ್ಥವಾಗದ ನಿರ್ಧಾರ. ನಾಗೇಂದ್ರಗೆ ಕ್ಲೀನ್‌ಚಿಟ್ ಸಿಕ್ಕಿದೆಯೇ ಎಂಬುದನ್ನು ಸರ್ಕಾರ ಬಹಿರಂಗಪಡಿಸಬೇಕು. ಇಲ್ಲವಾದರೆ ಕೂಡಲೇ ಸಚಿವ ಸ್ಥಾನದಿಂದ ಅವರನ್ನು ಕೆಳಗಿಳಿಸಿ ಅದೇ ಸಮುದಾಯದ ಬೇರೆಯವರನ್ನು ಮಂತ್ರಿ ಮಾಡಿ ಎಂದು ಎಂದು ಆಗ್ರಹಿಸಿದರು.

ಇದಕ್ಕೆ ಸರ್ಕಾರ ಸ್ಪಂದಿಸದೇ ಇದ್ದರೆ, ದೋಸ್ತಿ ಪಕ್ಷ ಜೆಡಿಎಸ್ ಜೊತೆಗೂಡಿ ಸದನದ ಒಳಗೆ ಮಾತ್ರವಲ್ಲದೆ ಹೊರಗೂ ಹೋರಾಟ ಮಾಡಲಾಗುವುದು. ಹಾಗೆಯೇ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು.

ಮುಂದೆ ಹಾಸನ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು. ಸರ್ಕಾರ ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯದೆ ನಿಷ್ಪಕ್ಷಪಾತ ತನಿಖೆಗೆ ಅವಕಾಶ ನೀಡಬೇಕು. ನೈತಿಕ ಹೊಣೆ ಹೊತ್ತು ನಾಗೇಂದ್ರ ಅವರ ರಾಜೀನಾಮೆ ಪಡೆಯುವ ಮೂಲಕ ಸರ್ಕಾರ ತನ್ನ ಬದ್ಧತೆ ತೋರಿಸಬೇಕೆಂದು ಒತ್ತಾಯಿಸಿದರು. ಇದನ್ನು ಕೇವಲ ರಾಜಕೀಯ ವಿಷಯವಾಗಿ ನೋಡದೆ, ಸಾಮಾಜಿಕ ನ್ಯಾಯದ ಪ್ರಶ್ನೆಯಾಗಿ ಸರ್ಕಾರ ಪರಿಗಣಿಸಬೇಕು. ನಾಗೇಂದ್ರ ಅವರ ರಾಜೀನಾಮೆ ಪಡೆಯುವವರೆಗೆ ನಿರಂತರ ಹೋರಾಟ ಮುಂದುವರಿಸಲಾಗುವುದು ಎಂದು ಎಚ್ಚರಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಅಮಿತ್ ಶೆಟ್ಟಿ, ರಾಜಕುಮಾರ್, ಮಾಧ್ಯಮ ವಕ್ತಾರ ಆರ್.ಮೋಹನ್, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಹಾಗೂ ವೇದಾವತಿ ಇದ್ದರು.

## ಹಾಸನ ಸಮಗ್ರ ಅಭಿವೃದ್ಧಿಗೆ ಕೇಂದ್ರದ ಮುಂದೆ ಹಲವು ಬೇಡಿಕೆ

### ರಸ್ತೆ, ಪ್ರವಾಸೋದ್ಯಮ, ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಆದ್ಯತೆ: ಶ್ರೇಯಸ್ ಪಟೇಲ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಸಮಗ್ರ ಅಭಿವೃದ್ಧಿ ದೃಷ್ಟಿಯಲ್ಲಿಟ್ಟುಕೊಂಡು ರಸ್ತೆ, ಹೆದ್ದಾರಿ, ಪ್ರವಾಸೋದ್ಯಮ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಿಗೆ ಸಂಬಂಧಿಸಿದ ಹಲವು ಮಹತ್ವದ ಯೋಜನೆಗಳಿಗೆ ಅನುಮೋದನೆ ಮತ್ತು ಅನುದಾನ ನೀಡುವಂತೆ ಕೇಂದ್ರ ಸರ್ಕಾರದ ವಿವಿಧ ಸಚಿವರಿಗೆ ಸಂಸದ ಶ್ರೇಯಸ್ ಪಟೇಲ್ ಬುಧವಾರ ಮನವಿ ಸಲ್ಲಿಸಿದ್ದಾರೆ.

ಜಿಲ್ಲೆಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಒಟ್ಟು 21.50 ಕೋಟಿ ರೂ. ಅನುದಾನ ನೀಡುವಂತೆ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಮನವಿ ಸಲ್ಲಿಸಿದರು. ಶ್ರವಣಬೆಳಗೊಳ ಸ್ಮಾರಕದ ಅಭಿವೃದ್ಧಿಗೆ 13 ಕೋಟಿ ರೂ., ಸಕಲೇಶಪುರದ ಮಂಜರಾಬಾದ್ ಕೋಟೆ ಅಭಿವೃದ್ಧಿಗೆ 4 ಕೋಟಿ ರೂ., ಹಳೇಬೀಡಿನ ಹೊಯ್ಸಳೇಶ್ವರ ದೇವಸ್ಥಾನ ಹಾಗೂ ಹುಚೇಶ್ವರ ದೇವಸ್ಥಾನಗಳ ಸಂರಕ್ಷಣೆಗೆ 3 ಕೋಟಿ ರೂ. ಮತ್ತು ಅರಸೀಕೆರೆಯ ಈಶ್ವರ ದೇವಸ್ಥಾನದ ಮುಂಭಾಗದ ಗುಮ್ಮಟ ಸಂರಕ್ಷಣೆಗೆ 1.50 ಕೋಟಿ ರೂ. ಅನುದಾನ ಕೋರಿದರು.

ಇದೇ ವೇಳೆ ಜಿಲ್ಲೆಯ ರಸ್ತೆ ಸಂಪರ್ಕವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರ ಬಳಿ ಹಲವು ಯೋಜನೆಗಳಿಗೆ ಶೀಘ್ರ ಅನುಮೋದನೆ ಹಾಗೂ ಅನುದಾನ



ನೀಡುವಂತೆ ಮನವಿ ಮಾಡಿದರು.

ನಗರದಲ್ಲಿ ರಾಷ್ಟ್ರೀಯ ಹೆದ್ದಾರಿ 48 ಮತ್ತು 373ರ ಸುಮಾರು 9 ಕಿ.ಮೀ. ರಸ್ತೆಗಳ ಸುಧಾರಣೆಗೆ 102 ಕೋಟಿ ರೂ. ವೆಚ್ಚದ ಕಾಮಗಾರಿಗೆ ಅನುಮೋದನೆ ನೀಡುವಂತೆ ಒತ್ತಾಯಿಸಲಾಗಿದೆ. ಬೇಲೂರುಹಾಸನ ರಾಷ್ಟ್ರೀಯ ಹೆದ್ದಾರಿ 373 ಅನ್ನು ನಾಲ್ಕು ಪಥದ ರಸ್ತೆಯಾಗಿ, ಪೇವ್ಡ್ ಶೋಲ್ಡರ್‌ಗಳೊಂದಿಗೆ ಅಭಿವೃದ್ಧಿಪಡಿಸುವ ಯೋಜನೆಗೂ ಅಗತ್ಯ ಅನುಮೋದನೆ ನೀಡುವಂತೆ ಮನವಿ ಮಾಡಿದರು.

ಬಾಣಾವರಹುಳಿಯಾರ್ ರಾಷ್ಟ್ರೀಯ ಹೆದ್ದಾರಿ 69ರ 48 ಕಿ.ಮೀ. ರಸ್ತೆ ಅಗಲೀಕರಣ ಹಾಗೂ ಬಲಪಡಿಸುವ ಕಾಮಗಾರಿಗೆ 106.63 ಕೋಟಿ ರೂ., ಮೊಸಳೆಹೊಸಹಳ್ಳಿ ರಾಷ್ಟ್ರೀಯ ಹೆದ್ದಾರಿ 373ರಲ್ಲಿ 2025ರ ಸೆಪ್ಟೆಂಬರ್‌ನಲ್ಲಿ ಸಂಭವಿಸಿದ ಭೀಕರ ಅಪಘಾತದಲ್ಲಿ 10 ಮಂದಿ ಮೃತಪಟ್ಟ ಹಿನ್ನೆಲೆಯಲ್ಲಿ, ಸ್ಥಳದಲ್ಲಿ ತಾಂತ್ರಿಕ ಸಾಧ್ಯತಾ ಅಧ್ಯಯನ ನಡೆಸಿ ಮೇಲ್ಸೇತುವೆ ಅಥವಾ ಗ್ರೇಡ್ ಸೆಪರೇಟರ್ ಸೇರಿದಂತೆ ಶಾಶ್ವತ ರಸ್ತೆ ಸುರಕ್ಷತಾ ಕ್ರಮ ಕೈಗೊಳ್ಳುವಂತೆಯೂ ಮನವಿ ಸಲ್ಲಿಸಿದರು.

#### ಐಐಟಿಗೆ ಪ್ರಸ್ತಾವನೆ

ಹಾಸನದಲ್ಲಿ ಭಾರತೀಯ ತಂತ್ರಜ್ಞಾನ ಸಂಸ್ಥೆ ಸ್ಥಾಪಿಸಬೇಕೆಂಬ ಜಿಲ್ಲೆಯ ಬಹುಕಾಲದ ಬೇಡಿಕೆಯನ್ನೂ ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದೆ. ಈಗಾಗಲೇ ಸೂಕ್ತ ಜಾಗವನ್ನು ಗುರುತಿಸಿ ಮೀಸಲಿರಿಸಲಾಗಿದ್ದು, ಹಾಸನದಲ್ಲಿ ಐಐಟಿ ಸ್ಥಾಪನೆಗೆ ಅಗತ್ಯ ಅನುಮೋದನೆ ನೀಡಿ ಮುಂದಿನ ಪ್ರಕ್ರಿಯೆಗಳನ್ನು ಶೀಘ್ರ ಆರಂಭಿಸುವಂತೆ ಕೇಂದ್ರ ಶಿಕ್ಷಣ ಸಚಿವ ಪ್ರಹ್ಲಾದ್ ಜೋಶಿ ಅವರಿಗೆ ಮನವಿ ಮಾಡಲಾಗಿದೆ. ಐಐಟಿ ಸ್ಥಾಪನೆಯಿಂದ ಜಿಲ್ಲೆಯ ವಿದ್ಯಾರ್ಥಿಗಳಿಗೆ ಉನ್ನತ ತಾಂತ್ರಿಕ ಶಿಕ್ಷಣ, ಸಂಶೋಧನೆ, ನವೋದ್ಯಮ ಹಾಗೂ ಉದ್ಯೋಗಾವಕಾಶಗಳು ಹೆಚ್ಚಲಿವೆ ಎಂದು ಮನವರಿಕೆ ಮಾಡಿಕೊಟ್ಟರು.

ಕಾರ್ಮಿಕರ ಆರೋಗ್ಯ ಸೇವೆ ಬಲಪಡಿಸುವ ನಿಟ್ಟಿನಲ್ಲಿ ಹಾಸನದಲ್ಲಿರುವ ಪ್ರಸ್ತುತ ಇಎಸ್‌ಐ ಡಿಸ್ಪೆನ್ಸರಿಯನ್ನು 200 ಹಾಸಿಗೆಗಳ ಪೂರ್ಣ ಪ್ರಮಾಣದ ಇಎಸ್‌ಐ ಆಸ್ಪತ್ರೆಗೆ ಮೇಲ್ದರ್ಜೆಗೇರಿಸುವಂತೆ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಮನವಿ ಸಲ್ಲಿಸಲಾಗಿದೆ. ಹಾಸನದಲ್ಲಿ ಸುಮಾರು 61,337 ಇಎಸ್‌ಐ ವಿಮಾ ಫಲಾನುಭವಿಗಳು ನೋಂದಣಿಯಾಗಿದ್ದು, ಗಂಭೀರ ಕಾಯಿಲೆಗಳು, ತುರ್ತು ಚಿಕಿತ್ಸೆ, ಶಸ್ತ್ರಚಿಕಿತ್ಸೆ ಹಾಗೂ ತಜ್ಞ ವೈದ್ಯಕೀಯ ಸೇವೆಗಾಗಿ ಜಿಲ್ಲೆಯ ಹೊರಗೆ ತೆರಳಬೇಕಾದ ಪರಿಸ್ಥಿತಿ ಇದೆ ಎಂದು ಸಮಸ್ಯೆ ವಿವರಿಸಿದರು.

ಪ್ರಸ್ತಾವಿತ 200 ಹಾಸಿಗೆಗಳ ಆಸ್ಪತ್ರೆಯಲ್ಲಿ ತಜ್ಞ ವೈದ್ಯಕೀಯ ವಿಭಾಗಗಳು, ತುರ್ತು ಚಿಕಿತ್ಸಾ ಘಟಕ, ತೀವ್ರ ನಿಗಾ ಘಟಕ, ಶಸ್ತ್ರಚಿಕಿತ್ಸಾ ಕೊಠಡಿಗಳು, ರೋಗನಿರ್ಣಯ ಸೌಲಭ್ಯಗಳು ಹಾಗೂ ಔಷಧಾಲಯ ಸೇರಿದಂತೆ ಅಗತ್ಯ ವೈದ್ಯಕೀಯ ಮೂಲಸೌಕರ್ಯ, ಆಸ್ಪತ್ರೆ ನಿರ್ಮಾಣಕ್ಕೆ ಸೂಕ್ತ ಜಾಗ ಗುರುತಿಸಿ ಸಾಧ್ಯತಾ ಅಧ್ಯಯನ ಹಾಗೂ ಅಗತ್ಯ ಆಡಳಿತಾತ್ಮಕ ಅನುಮೋದನೆಗಳನ್ನು ಶೀಘ್ರ ನೀಡುವಂತೆಯೂ ಕೋರಿದರು.

## ವ್ಯಕ್ತಿತ್ವ ವಿಕಸನಕ್ಕೆ ರಾಷ್ಟ್ರೀಯ ಸೇವಾ ಯೋಜನೆ ಸಹಕಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ದೇಶಪ್ರೇಮ ಹಾಗೂ ವ್ಯಕ್ತಿತ್ವ ವಿಕಸನದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆಂದು ಹಾಸನ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಸಂಯೋಜನಾಧಿಕಾರಿ ರವಿಕುಮಾರ್ ಹೇಳಿದರು.

ನಗರದ ಜ್ಞಾನಧಾರೆ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ನಡೆದ ಅಭಿವಿನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಈ ಚಟುವಟಿಕೆಯಲ್ಲಿ ಭಾಗವಹಿಸುವ ಮೂಲಕ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.




ಅಧ್ಯಕ್ಷತೆಯನ್ನು ಪ್ರಾಂಶುಪಾಲ ಎಂ.ಎನ್.ಕಾಂತರಾಜು ವಹಿಸಿದ್ದರು. ಜಿಲ್ಲಾ ಯುವ ಸಮನ್ವಯ ಅಧಿಕಾರಿ ಜಿತ್ಯಾ, ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಸಂಜಯ್ ಕುಮಾರ್, ಉಪನ್ಯಾಸಕ ಶ್ರೀನಿವಾಸ್, ಸುನಿಲ್, ಪೂಜಾ ಮತ್ತಿತರರಿದ್ದರು.

## ಒಂದೇ ರಾತ್ರಿ ಮೂರು ಮನೆಯಲ್ಲಿ ಕಳ್ಳತನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಒಂದೇ ರಾತ್ರಿಯಲ್ಲಿ ಅಕ್ಕಪಕ್ಕದ ಮೂರು ಮನೆಗಳಲ್ಲಿ ಕಳ್ಳತನವಾಗಿರುವ ಘಟನೆ ತಾಲ್ಲೂಕಿನ ಚೋಳೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರವಿ, ಶಿವಕುಮಾರ್ ಎಂಬುವವರ ಮನೆಯಿಂದ 79 ಗ್ರಾಂ ತೂಕದ ಚಿನ್ನಾಭರಣ ಹಾಗೂ 50 ಸಾವಿರ ರೂ. ನಗದು ಕದ್ದಿದ್ದಾರೆ.

ಆ. 9ರ ರಾತ್ರಿ ರವಿ ಅವರ ಮನೆಗೆ ಬಂದಿರುವ ಕಳ್ಳರು ಹಿಂಭಾಗದಲ್ಲಿ ಅಳವಡಿಸಿದ್ದ ವಿದ್ಯುತ್ ಬಲ್ಬ್ ಅನ್ನು ಅಲ್ಲಿಯೇ ಬಿಚ್ಚಿಟ್ಟು ಬಾಗಿಲು ಮುರಿದು ಒಳ ಪ್ರವೇಶಿಸಿದ್ದಾರೆ. ಹಾಲ್‌ನಲ್ಲಿಟ್ಟಿದ್ದ ಪೆಟ್ಟಿಗೆಯನ್ನು ಸುಮಾರು 150 ಮೀಟರ್ ದೂರ ತೆಗೆದುಕೊಂಡು ಹೋಗಿ ಅದರಲ್ಲಿದ್ದ 79 ಗ್ರಾಂ ತೂಕದ ಚಿನ್ನಾಭರಣ ಹಾಗೂ 30 ಸಾವಿರ ರೂ. ದೋಚಿದ್ದಾರೆ. ನಂತರ ಅದೇ ಮನೆಗೆ ಹೊಂದಿಕೊಂಡಿರುವ ರವಿ ಅವರ ಸಹೋದರ ಶಿವಕುಮಾರ್ ಮನೆಗೆ ನುಗ್ಗಿ ಅಲ್ಲಿದ್ದ ಪೆಟ್ಟಿಗೆಯನ್ನು ಮನೆಯಿಂದ ಸುಮಾರು 50 ಮೀಟರ್ ದೂರದಲ್ಲಿಟ್ಟು ಅದರಲ್ಲಿದ್ದ 20 ಸಾವಿರ ರೂ. ಪಡೆದಿದ್ದಾರೆ.

ಅದೇ ರೀತಿ ಸುಬ್ಬಮ್ಮ ಎಂಬುವವರ ಮನೆಗೆ ಪ್ರವೇಶಿಸಿ ಬಟ್ಟೆಬರೆಗಳನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿದ್ದಾರೆ. ಹಳ್ಳಿಮೈಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಶಿರಾಡಿ ಮಾರ್ಗದಲ್ಲಿ ವಂದೇ ಭಾರತ್ ಪ್ರಾಯೋಗಿಕ ಸಂಚಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಬೆಂಗಳೂರು ಮತ್ತು ಮಂಗಳೂರು ನಡುವೆ ಸಂಪರ್ಕ ಕಲ್ಪಿಸುವ ಅತ್ಯಾಧುನಿಕ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಪ್ರಾಯೋಗಿಕ ಸಂಚಾರ (ಟ್ರಯಲ್ ರನ್), ಪಟ್ಟಣದ ನಿಲ್ದಾಣದಿಂದ ಶಿರಾಡಿಘಾಟ್ ಹಾದು ದಕ್ಷಿಣ ಕನ್ನಡದ ಕುಕ್ಕೆ ಸುಬ್ರಹ್ಮಣ್ಯದವರೆಗೆ ಯಶಸ್ವಿಯಾಗಿ ಆರಂಭಗೊಂಡಿದೆ. ಅತ್ಯಂತ ಕಠಿಣ ಹಾಗೂ ತಿರುವುಗಳಿಂದ ಕೂಡಿದ ಶಿರಾಡಿಘಾಟ್ ಮಾರ್ಗದಲ್ಲಿ ಈ ರೈಲು ಸಂಚರಿಸುವ ಮೂಲಕ ಇತಿಹಾಸ ಬರೆದಿದೆ.



ಬುಧವಾರ ಬೆಳಿಗ್ಗೆ 6 ಗಂಟೆ ಸುಮಾರಿಗೆ ಬೆಂಗಳೂರಿನಿಂದ ಸಕಲೇಶಪುರ ರೈಲ್ವೆ ನಿಲ್ದಾಣಕ್ಕೆ ಆಗಮಿಸಿದ ವಂದೇ ಭಾರತ್ ರೈಲಿಗೆ ಸ್ಥಳೀಯ ಶಾಸಕ ಸಿಮೆಂಟ್ ಮಂಜು ಹಾಗೂ ಇತರರು ವಿಶೇಷ ಪೂಜೆ ಸಲ್ಲಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಈ ಭಾಗದಲ್ಲೂ ವಂದೇ ಭಾರತ್ ರೈಲು ಸಂಚಾರ ಆರಂಭಕ್ಕೆ ರೈಲ್ವೆ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಅವರನ್ನು ಸಿಮೆಂಟ್ ಮಂಜು ಭೇಟಿ ಮಾಡಿ ನಿರಂತರವಾಗಿ ಮನವಿ ಸಲ್ಲಿಸಿದ್ದರು.

ಅದಕ್ಕೆ ಪೂರಕವಾಗಿ ಸಕಲೇಶಪುರ ಮಾರ್ಗದವರೆಗಿನ ರೈಲ್ವೆ ವಿದ್ಯುದ್ದೀಕರಣ ಕಾಮಗಾರಿಗಳು ಸಂಪೂರ್ಣವಾಗಿ ಪೂರ್ಣಗೊಂಡಿದ್ದು, ಈಗ ಟ್ರಯಲ್ ರನ್ ಪ್ರಕ್ರಿಯೆ ಚಾಲನೆಯಲ್ಲಿದೆ.

ಈ ವಿಶೇಷ ವಂದೇ ಭಾರತ್ ರೈಲು 20 ಬೋಗಿಗಳನ್ನು ಹೊಂದಿದ್ದು, ಏಕಕಾಲಕ್ಕೆ 1,080 ಪ್ರಯಾಣಿಕರು ಅತ್ಯಂತ ಸುಖಕರವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

ಘಾಟ್ ಪ್ರದೇಶದ ಕಡಿದಾದ ಇಳಿಜಾರಿನಲ್ಲಿ ಸುರಕ್ಷಿತವಾಗಿ ಚಲಿಸಲು ಈ ರೈಲಿನಲ್ಲಿ ಅತ್ಯಾಧುನಿಕ ಆಟೋಮ್ಯಾಟಿಕ್ ಎಮರ್ಜೆನ್ಸಿ ಬ್ರೇಕಿಂಗ್ ವ್ಯವಸ್ಥೆ ಅಳವಡಿಸಲಾಗಿದೆ.

ಐಷಾರಾಮಿ ಸಾರಿಗೆ ವ್ಯವಸ್ಥೆ: ಬೆಂಗಳೂರು ಹಾಗೂ ಕರಾವಳಿ ಭಾಗದ ಪ್ರಯಾಣಿಕರಿಗೆ ಇನ್ನು ಮುಂದೆ ಅತ್ಯಂತ ವೇಗದ ಮತ್ತು ಐಷಾರಾಮಿ ಸಾರಿಗೆ ವ್ಯವಸ್ಥೆ ಸಿಗಲಿದೆ. ಈ ಪ್ರಾಯೋಗಿಕ ಸಂಚಾರ ಯಶಸ್ವಿಯಾದ ಬೆನ್ನಲ್ಲೇ, ಶೀಘ್ರವೇ ರೈಲು ಸಾರ್ವಜನಿಕರ ಸೇವೆಗೆ ಮುಕ್ತವಾಗುವ ಸಾಧ್ಯತೆ ಇದೆ. ವಂದೇ ಭಾರತ್ ಎಕ್ಸ್‌ಪ್ರೆಸ್ ಪ್ರತಿದಿನ ನಿಯಮಿತವಾಗಿ ಸಂಚಾರ ಆರಂಭಿಸಲಿ ಎಂಬುದು ಹಾಸನ ಹಾಗೂ ಕರಾವಳಿ ಜಿಲ್ಲೆಗಳ ಪ್ರಯಾಣಿಕರ ತೀವ್ರ ಆಶಯವಾಗಿದೆ.

ಶಾಸಕ ಸಿಮೆಂಟ್ ಮಂಜು ಮಾತನಾಡಿ, ಮಲೆನಾಡಿನ ಜನರ ಬಹುದಿನಗಳ ಕನಸು ನನಸಾಗುವ ಸಮಯ ಸನ್ನಿಹಿತವಾಗಿದೆ. ಬೆಂಗಳೂರು-ಮಂಗಳೂರು ನಡುವೆ ವಂದೇ ಭಾರತ್ ರೈಲಿನ ಪ್ರಾಯೋಗಿಕ ಸಂಚಾರ ಸಕಲೇಶಪುರದವರೆಗೆ ನಡೆದಿರುವುದು ಈ ಭಾಗದ ನಾಗರಿಕರಿಗೆ ಸುದಿನ ಎಂದು ಹೇಳಿದರು.

ಶಿರಾಡಿಘಾಟ್ ಮಾರ್ಗದಲ್ಲಿ ಮಳೆ, ಭೂಕುಸಿತ ಹಾಗೂ ಸಂಚಾರ ದಟ್ಟಣೆಯಿಂದ ರಸ್ತೆ ಪ್ರಯಾಣಕ್ಕೆ ಅಡಚಣೆ ಉಂಟಾಗುವ ಸಂದರ್ಭದಲ್ಲಿ ರೈಲು ಸೇವೆ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ ಎಂದು ಅಭಿಪ್ರಾಯಪಟ್ಟರು.

ವಂದೇ ಭಾರತ್ ರೈಲಿನಲ್ಲಿ ಆಧುನಿಕ ಸೌಲಭ್ಯಗಳಿದ್ದು, ಹೆಚ್ಚಿನ ಸಂಖ್ಯೆಯ ಪ್ರಯಾಣಿಕರಿಗೆ ಆರಾಮದಾಯಕ ಪ್ರಯಾಣದ ಅನುಭವ ನೀಡಲಿದೆ. ಮುಂದಿನ ದಿನಗಳಲ್ಲಿ ಸಕಲೇಶಪುರಕ್ಕೆ ಇಂಟರ್‌ಸಿಟಿ ಸೇರಿದಂತೆ ಮತ್ತಷ್ಟು ರೈಲು ಸೇವೆಗಳನ್ನು ವಿಸ್ತರಿಸಬೇಕು. ವಂದೇ ಭಾರತ್ ರೈಲು ಪ್ರತಿದಿನ ಸಕಲೇಶಪುರದಲ್ಲಿ ನಿಲುಗಡೆ ನೀಡಿ ಸಂಚರಿಸುವಂತಾಗಬೇಕು ಎಂಬುದು ನಮ್ಮೆಲ್ಲರ ಆಶಯವಾಗಿದೆ ಎಂದು ಹೇಳಿದರು.

ರೈಲ್ವೆ ಅಧಿಕಾರಿಗಳ ತಂಡವೂ ಸ್ಥಳಕ್ಕೆ ಆಗಮಿಸಿ ರೈಲಿನ ಪ್ರಾಯೋಗಿಕ ಸಂಚಾರಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಪರಿಶೀಲಿಸಿತು.

# ವಿಶ್ವಕಪ್ ಹಾಕಿಗೆ ಹಳ್ಳಿ ಪ್ರತಿಭೆ ಆಯ್ಕೆ: ಗರಿಗೆದರಿದ ಕನಸು

## ಹೊನ್ನೇನಹಳ್ಳಿಯಲ್ಲಿ ಮನೆ ಮಾಡಿದ ಸಂಭ್ರಮ ಮೋಹಿತ್ ಸಾಧನೆಗೆ ಅಭಿನಂದನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದ ಯುವಕನೊಬ್ಬ ರಾಷ್ಟ್ರೀಯ ಮಟ್ಟದ ಕ್ರೀಡೆಯಲ್ಲಿ ಭಾಗವಹಿಸಿ ಹುಟ್ಟಿದ ಊರು ಜಿಲ್ಲೆಗೆ ಕೀರ್ತಿ ತರುವುದು ನಿಜವಾದ ಸಾಧನೆ.

ಆ ಕೀರ್ತಿ ಪತಾಕೆಗೆ ಸಾಕ್ಷಿಯಾಗಲಿದ್ದಾರೆ ತಾಲ್ಲೂಕಿನ ಹೆಚ್.ಹೊನ್ನೇನಹಳ್ಳಿ ಗ್ರಾಮದ ಯುವಕ ಹೆಚ್.ಎಸ್.ಮೋಹಿತ್.

ಹೌದು, ನೆದರ್ಲ್ಯಾಂಡ್ ಹಾಗೂ ಬೆಲ್ಜಿಯಂನಲ್ಲಿ ಆ. 15 ರಂದು ನಡೆಯಲಿರುವ 16ನೇ ಆವೃತ್ತಿಯ ಎಫ್.ಐ.ಹೆಚ್ (ಫೆಡರೇಷನ್ ಆಫ್ ಇಂಟರ್ ನ್ಯಾಷನಲ್ ಹಾಕಿ) ವಿಶ್ವಕಪ್‌ನ ಭಾರತೀಯ ಪುರುಷರ ತಂಡಕ್ಕೆ ಹಿರೀಸಾವೆ ಹೋಬಳಿ ಹೆಚ್. ಹೊನ್ನೇನಹಳ್ಳಿ ಗ್ರಾಮದ ಹೆಚ್.ಎಸ್.ಮೋಹಿತ್ ಆಯ್ಕೆಯಾಗಿದ್ದಾರೆ.

ಗ್ರಾಮದ ಹೆಚ್.ವಿ.ಶಶಿಕುಮಾರ್ ಹಾಗೂ ಆಶಾರಾಣಿ ಅವರ ಪುತ್ರ ಮೋಹಿತ್ 12 ವರ್ಷಗಳ ನಂತರ ಕರ್ನಾಟಕದಿಂದ ಭಾರತೀಯ ಸೀನಿಯರ್ ಹಾಕಿ ತಂಡಕ್ಕೆ ಆಯ್ಕೆಯಾಗುವ ಮೂಲಕ ಗ್ರಾಮದಲ್ಲಿ ಸಂತಸದ ವಾತಾವರಣ ನಿರ್ಮಿಸಿದ್ದಾರೆ.

1 ರಿಂದ 4 ನೇ ತರಗತಿ ವರೆಗೆ ಚನ್ನರಾಯಪಟ್ಟಣದ ನಾಗಶ್ರೀ ವಿದ್ಯಾಸಂಸ್ಥೆಯಲ್ಲಿ ಶಿಕ್ಷಣ ಪಡೆದಿರುವ ಅವರು 4 ಹಾಗೂ 5ನೇ ತರಗತಿಯನ್ನು ಪಟ್ಟಣದ ಜ್ಞಾನಸಾಗರ ವಿದ್ಯಾಸಂಸ್ಥೆಯಲ್ಲಿ ಪಡೆದಿದ್ದಾರೆ.

ಕ್ರೀಡೆ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದರಿಂದ ಕುಶಾಲನಗರದ ಕೂಡಗಿ ಸ್ಪೋರ್ಟ್ಸ್ ಹಾಸ್ಟೆಲ್‌ನಲ್ಲಿ ನಂತರದ ಶಿಕ್ಷಣ ಮುಂದುವರಿಸಿದರು. ಪ್ರಾರಂಭದಲ್ಲಿ ವಾಲಿಬಾಲ್ ತರಬೇತಿ ಪಡೆಯುತ್ತಿದ್ದ ಮೋಹಿತ್ 9ನೇ ತರಗತಿಯಲ್ಲಿದ್ದಾಗ ವಾಲಿಬಾಲ್‌ನತ್ತ ಆಸಕ್ತಿ ಬೆಳೆಸಿಕೊಂಡರು. 2021ರಲ್ಲಿ ಖೇಲೋ ಇಂಡಿಯಾ ಮೂಲಕ ರಾಜ್ಯ ಮಟ್ಟದ ಹಾಕಿ ತಂಡಕ್ಕೆ ಮೊದಲ ಬಾರಿಗೆ ಆಯ್ಕೆಯಾಗಿ 2022ರಲ್ಲಿ ರಾಷ್ಟ್ರೀಯ ಶಿಬಿರದ ಮೂಲಕ 2022ರ ಜೂನಿಯರ್ ತಂಡಕ್ಕೆ ಆಯ್ಕೆಯಾದರು. ಅಲ್ಲಿಂದ ಶುರುವಾದ ಅವರ ಕ್ರೀಡಾ ಓಟ 2026ನೇ ಹಾಕಿ ವಿಶ್ವಕಪ್ ಪಂದ್ಯ ತಲುಪಿದೆ.

2022 ಹಾಗೂ 2023ನೇ ಸಾಲಿನಲ್ಲಿ ಮಲೇಷಿಯಾದಲ್ಲಿ ನಡೆದ ಸುಲ್ತಾನ್ ಜುವಾರ್ ಕಪ್‌ನಲ್ಲಿ ಗೋಲ್ ಕೀಪರ್ ಆಗಿ ಆಸ್ಟ್ರೇಲಿಯಾ ವಿರುದ್ಧ ಫೈನಲ್ ಪಂದ್ಯದಲ್ಲಿ ಭಾರತೀಯ ತಂಡವು ಗೆಲುವು ಸಾಧಿಸಿದ್ದು ಮೋಹಿತ್ ಅವರು ಗೋಲ್ಡ್



ಮೆಡಲ್ ಹಾಗೂ ಪಂದ್ಯ ಪುರುಷೋತ್ತಮ ಪ್ರಶಸ್ತಿ ಪಡೆದಿದ್ದಾರೆ.

2023ರಲ್ಲಿ ಜೂನಿಯರ್ ಏಷ್ಯಾ ಕಪ್‌ನಲ್ಲಿ ಪಾಕಿಸ್ತಾನ ವಿರುದ್ಧ ಭಾರತೀಯ ತಂಡವು ಗೆಲುವು ಸಾಧಿಸಿದ್ದು ಮೋಹಿತ್ ಮತ್ತೊಮ್ಮೆ ಗೋಲ್ಡ್ ಮೆಡಲ್ ಹಾಗೂ ಮ್ಯಾನ್ ಆಫ್ ದಿ ಮ್ಯಾಚ್ ಪ್ರಶಸ್ತಿಗೆ ಭಾಜನವಾಗಿದ್ದು ಅವರ ಯಶಸ್ಸಿಗೆ ಮತ್ತೊಂದು ಗರಿ ಸಿಕ್ಕಂತಾಗಿದೆ.

2023ರಲ್ಲಿ ಬೆಸ್ಟ್ ಗೋಲ್ ಕೀಪರ್ ಆಫ್ ದಿ ಇಯರ್ ಅವಾರ್ಡ್, 2024 ಹಾಗು 2025ರಲ್ಲಿ ಹಾಕಿ ಇಂಡಿಯನ್ ಲೀಗ್‌ನಲ್ಲಿ ಪಂಜಾಬ್ ತಂಡದಲ್ಲಿ ಸ್ಥಾನ ಪಡೆದು ಉತ್ತಮ ಪ್ರದರ್ಶನ ನೀಡುವ ಮೂಲಕ ಕ್ರೀಡಾಭಿಮಾನಿಗಳಿಂದ ಸೈ ಎನಿಸಿಕೊಂಡಿದ್ದಾರೆ.

ಕುಶಾಲನಗರ ಕೂಡಗಿಯ ಕ್ರೀಡಾ ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವೇಳೆ ಸಂಜಯ್ ಬಾಣತ್ ಅವರು ಹಾಕಿ ತರಬೇತಿ ನೀಡುವ ಮೂಲಕ ಮೋಹಿತ್ ಅವರ ಯಶಸ್ಸಿನ ಮೊದಲ ಗುರುವಾಗಿದ್ದರು ಎಂದು ಮೋಹಿತ್ ತಂದೆ ಶಶಿಕುಮಾರ್ ಅವರು ಹೇಳಿದರು.

# ಖಾಲಿ ನಿವೇಶನಗಳ ಸ್ವಚ್ಛಗೊಳಿಸುವ ಗಡುವು

## ಮಾಲಿಕರಿಗೆ ಗುಡ್ ನ್ಯೂಸ್!

ಬೆಂಗಳೂರು: ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸುವುದಕ್ಕೆ ಮಾಲೀಕರಿಗೆ ನೀಡಲಾಗಿದ್ದ ಗಡುವನ್ನು ಆಗಸ್ಟ್ 22 ರವರೆಗೆ ವಿಸ್ತರಿಸಲಾಗಿದೆ ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಇಲಾಖೆ ಬುಧವಾರ ತಿಳಿಸಿದೆ.

ಹೆಚ್ಚುವರಿ ಸಮಯವನ್ನು ತಮ್ಮ ಆವರಣಗಳನ್ನು ಸ್ವಚ್ಛಗೊಳಿಸಲು ಮತ್ತು ನಗರಾದ್ಯಂತದ ಇಲಾಖೆಯ ಪ್ರಯತ್ನಕ್ಕೆ ಕೊಡುಗೆ ನೀಡಲು ಸಹ ಮನವಿ ಮಾಡಿದೆ.

ಆ.15 ರ ವೇಳೆಗೆ ಆಸ್ತಿ ಮಾಲೀಕರು ತಮ್ಮ ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸಲು ಈ ಹಿಂದೆ ಗಡುವು ನಿಗದಿಪಡಿಸಲಾಗಿತ್ತು. ಹೆಚ್ಚುವರಿ ಸಮಯದ ವಿನಂತಿಗಳನ್ನು ಪರಿಗಣಿಸಿ, ಗಡುವನ್ನು ಈಗ ಆಗಸ್ಟ್ 22



ರವರೆಗೆ ವಿಸ್ತರಿಸಲಾಗುತ್ತದೆ ಎಂದು ಇಲಾಖೆ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಬೆಂಗಳೂರನ್ನು ಸ್ವಚ್ಛ, ಹೆಚ್ಚು ಸುಂದರ ಮತ್ತು ಹೆಚ್ಚು ವಾಸಯೋಗ್ಯವಾಗಿಸುವ ಗುರಿಯನ್ನು ಹೊಂದಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಆಗಸ್ಟ್ 1 ರಂದು ಪ್ರಾರಂಭಿಸಿದ ತ್ಯಾಜ್ಯದಿಂದ ಸ್ವಾತಂತ್ರ್ಯ ಅಭಿಯಾನದ ಭಾಗವಾಗಿ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಇಲಾಖೆಯ ಪ್ರಕಾರ, ಅಭಿಯಾನದ ಭಾಗವಾಗಿ, ಸಾರ್ವಜನಿಕ ಸ್ಥಳಗಳಿಂದ ಅಕ್ರಮವಾಗಿ ಸುರಿಯಲ್ಪಟ್ಟ ಅವಶೇಷಗಳು, ಮಿತಿಮೀರಿ ಬೆಳೆದ ಕಳೆಗಳು ಮತ್ತು ಇತರ ತ್ಯಾಜ್ಯಗಳನ್ನು ತೆರವುಗೊಳಿಸಲು ನಗರದಾದ್ಯಂತ 100 ಟ್ರಕ್‌ಗಳು ಮತ್ತು 25 ಅಗೆಯುವ ಯಂತ್ರಗಳನ್ನು ನಿಯೋಜಿಸಲಾಗಿದೆ.

ಇಲ್ಲಿಯವರೆಗೆ, ಈ ಅಭಿಯಾನದ ಪರಿಣಾಮವಾಗಿ 30,000 ಟನ್‌ಗಳಿಗೂ ಹೆಚ್ಚು ಕಸ ಮತ್ತು ಮಿತಿಮೀರಿ ಬೆಳೆದ ಸಸ್ಯಗಳನ್ನು ತೆಗೆದುಹಾಕಲಾಗಿದೆ ಎಂದು ಅದು ಹೇಳಿದೆ. ಖಾಲಿ ನಿವೇಶನಗಳ ಮಾಲೀಕರು ತಮ್ಮ ಆಸ್ತಿಗಳಿಂದ ಸಂಗ್ರಹವಾದ ಕಸ ಮತ್ತು ಮಿತಿಮೀರಿ ಬೆಳೆದ ಕಳೆಗಳನ್ನು ಆದಷ್ಟು ಬೇಗ ತೆಗೆದುಹಾಕಬೇಕೆಂದು ಅಧಿಕಾರಿಗಳು ಒತ್ತಾಯಿಸಿದ್ದಾರೆ.

ಬೆಂಗಳೂರಿನಲ್ಲಿ ಸುಧಾರಣೆಗಾಗಿ ಖಾಸಗಿ ಒಡೆತನದ ಸ್ಥಳಗಳು ಮತ್ತು ಸಾರ್ವಜನಿಕ ಭೂಮಿ ಎರಡನ್ನೂ ಸ್ವಚ್ಛಗೊಳಿಸಬೇಕು ಎಂದು ಬಿಡಿಎ ಹೇಳಿದೆ.

ಈ ಹಿಂದೆ, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರು ಇಲ್ಲಿ ಖಾಲಿ ನಿವೇಶನಗಳ ಮಾಲೀಕರು ತಮ್ಮ ಆಸ್ತಿಗಳನ್ನು ಸ್ವಚ್ಛಗೊಳಿಸಲು ವಿಫಲವಾದರೆ 25,000 ರೂ.ಗಳಿಂದ 1 ಲಕ್ಷ ರೂ.ಗಳವರೆಗೆ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಿದ್ದರು.

## ಇತಿಹಾಸದಲ್ಲಿ ಈ ದಿನ

### ಆಗಸ್ಟ್-13



1521 : ಹೆರ್ನಾನ್ ಕಾರ್ಟೆಸ್ ನೇತೃತ್ವದ ಸ್ಪಾನಿಷ್ ವಿಜಯಶಾಲಿಗಳು ಟೆನೊಚ್ಟಿಟ್ಲಾನ್‌ನಲ್ಲಿ ಅಜ್ಟೆಕ್ ಚಕ್ರವರ್ತಿ ಕ್ವಾಹ್ಟೆಮೊಕ್ ಅನ್ನು ವಶಪಡಿಸಿಕೊಂಡರು , ಅಜ್ಟೆಕ್ ಸಾಮ್ರಾಜ್ಯವನ್ನು ಅಂತ್ಯಗೊಳಿಸಿದರು

ಕ್ಯೋಟೋದ ಎನ್ರಿಯಾಕು-ಜಿ ದೇವಾಲಯದ 1536 ಬೌದ್ಧ ಸನ್ಯಾಸಿಗಳು ಟೆನ್ಬನ್ ಹೊಕ್ಕೆ ಡಿಸ್ಟರ್ಬೆನ್ಸ್ ನಲ್ಲಿ ಕ್ಯೋಟೋದಾದ್ಯಂತ 21 ನಿಚಿರೆನ್ ದೇವಾಲಯಗಳಿಗೆ ಬೆಂಕಿ ಹಚ್ಚಿದರು (ಸಾಂಪ್ರದಾಯಿಕ ಜಪಾನೀಸ್ ದಿನಾಂಕ: ಜುಲೈ 27, 1536)

1642: ಡಚ್ ಖಗೋಳಶಾಸ್ತ್ರಜ್ಞ ಕ್ರಿಸ್ಟಿಯಾನ್ ಹ್ಯೂಜೆನ್ಸ್ ಮಂಗಳ ಗ್ರಹದ ದಕ್ಷಿಣ ಧ್ರುವದ ಕ್ಯಾಪ್ ಅನ್ನು ಕಂಡುಹಿಡಿದರು.

1788-1788-90ರ ರಷ್ಯಾ-ಸ್ವೀಡಿಷ್ ಯುದ್ಧದ ಹರಡುವಿಕೆಯನ್ನು ತಡೆಗಟ್ಟಲು ಪ್ರಶ್ಯವು ಆಂಗ್ಲೋ-ಡಚ್ ಮೈತ್ರಿಕೂಟವನ್ನು ಸೇರಿ ಟ್ರಿಪಲ್ ಮೈತ್ರಿಕೂಟವನ್ನು ರಚಿಸಿತು.

1937 :ರ ಎರಡನೇ ಚೀನಾ-ಜಪಾನೀಸ್ ಯುದ್ಧ: ಜಪಾನಿನ ಪಡೆಗಳು ಶಾಂಘೈ ಕದನವನ್ನು ಪ್ರಾರಂಭಿಸಿದವು, ಇದು ಮೂರು ತಿಂಗಳ ಕಾಲ ನಡೆದ ಸಂಘರ್ಷವಾಗಿದ್ದು, ಒಂದು ಮಿಲಿಯನ್ ಗೂ ಹೆಚ್ಚು ಸೈನಿಕರು ಭಾಗವಹಿಸಿದರು.

1967 : ರಲ್ಲಿ ಆರ್ಥರ್ ಪೆನ್ ನಿರ್ದೇಶಿಸಿದ ಮತ್ತು ವಾರೆನ್ ಬೀಟಿ ಮತ್ತು ಫಾಯೆ ಡನವೇ ನಟಿಸಿದ ಬೋನಿ ಮತ್ತು ಕ್ಲೈಡ್ ಅಪರಾಧ ಚಿತ್ರ ಬಿಡುಗಡೆಯಾಯಿತು.

2013 : ರಲ್ಲಿ ಲ್ಯೂಕ್ ಬ್ರಯಾನ್ ಅವರ ನಾಲ್ಕನೇ ಸ್ಟುಡಿಯೋ ಆಲ್ಬಂ ಕ್ರ್ಯಾಶ್ ಮೈ ಪಾರ್ಟಿ ಬಿಡುಗಡೆಯಾಯಿತು (ವರ್ಷದ ಬಿಲ್ಬೋರ್ಡ್ ಆಲ್ಬಂ 2014)

2008 : ರ ಅಮೆರಿಕದ ಸೂಪರ್-ಈಜುಗಾರ ಮೈಕೆಲ್ ಫೆಲ್ಪ್ಸ್ ಬೀಜಿಂಗ್ ಒಲಿಂಪಿಕ್ಸ್ ನಲ್ಲಿ ಒಂದೇ ದಿನದಲ್ಲಿ ಮೂರು ಚಿನ್ನದ ಪದಕಗಳನ್ನು ಗೆದ್ದರು, ಎಲ್ಲವೂ ವಿಶ್ವ ದಾಖಲೆಯ ಸಮಯದಲ್ಲಿ: 200 ಮೀ

# ಅದೊಂದು ಬೇರೆಯದೇ ಅನುಭೂತಿ...3

**ಧನಂಜಯ ಜೀವಾಳ ಬಿ.ಕೆ.**




ಗ್ರಾಮಾಯಣ-45

ಇವತ್ತಿನ ಚಾರಣಕ್ಕೆ ನಮಗೆ ಗೈಡ್ ಆಗಿ ಇದೇ ಭೈರಾಪುರದ ಚಂದ್ರೇಗೌಡರು ನಮ್ಮೊಟ್ಟಿಗೆ ಇರ್ತಾರೆ. ನೋಡಿ ಆ ಬುಟ್ಟಿಯಲ್ಲಿ ಕಿತ್ತಲೆಹಣ್ಣುಗಳು, ಈಚೆ ಬಾಳೆಹಣ್ಣುಗಳು ಇದಾವೆ. ಅದರ ಪಕ್ಕದ ಬಾಕ್ಸ್ ನಲ್ಲಿ ಹುಳಿ ಪೆಪ್ಪರಮಿಂಟದಾವೆ. ಅಲ್ಲೇ ಒಂದು ಮೂಟೆಯಲ್ಲಿ ಸೌತೇಕಾಯಿ ಇವೆ, ಎಲ್ಲರೂ ಸಾಲಾಗಿ ಬಂದು ಒಂದು ಸೌತೇಕಾಯಿ, ಎರಡು ಕಿತ್ಲೆಹಣ್ಣು, ಎರಡು ಬಾಳೆಹಣ್ಣು, ನಾಲ್ಕು ನಾಲ್ಕು ಪೆಪ್ಪರಮಿಂಟುಗಳನ್ನ ತಗೋಳ್ಳಿ. ನಿಮ್ನಿಮ್ಮ ವಾಟರ್ ಬಾಟ್ಲಿಗಳನ್ನ ತುಂಬಿಸ್ಕೊಳ್ಳಿ.

ಕಡಿದಾದ ಕಲ್ಲಿನ ಏರನ್ನು ಹಗ್ಗದ ಸಹಾಯದಿಂದ ಹತ್ತುವುದಿದ್ದಲ್ಲಿ, ಪರಿಣಿತರ ಸಲಹೆ, ಮಾರ್ಗದರ್ಶನ ಅತ್ಯಗತ್ಯ. ಈ ಸಾಹಸಕ್ಕೆ ಅಗತ್ಯವಾದ ಸಲಕರಣೆಗಳು, ವಿಶೇಷ ಬೂಟುಗಳು, ಹೆಲ್ಮೆಟ್, ಬಲವಾದ ಹಗ್ಗ, ದೈಹಿಕ ಸಾಮರ್ಥ್ಯಗಳಲ್ಲದೇ ಸೂಕ್ತ ತರಬೇತಿಯೂ ಬೇಕಾಗುತ್ತೆ. ಚಾರಣದ ಸಮಯದಲ್ಲಿ ಬೇಕಾಗಿರುವ ಮೂಲಭೂತ ಸಲಕರಣೆಗಳು, ಅಗತ್ಯವಿದ್ದಲ್ಲಿ ಟೊಪ್ಪಿ, ಸ್ವೆಟರ್, ರೈನ್ ಕೋಟ್, ಸಾಕ್ಸ್ ಮತ್ತು ಬೂಟ್, ಜಿಗಣೆಯಿರುವ ಸ್ಥಳವಾದಲ್ಲಿ ಬೇವಿನೆಣ್ಣೆ ಮತ್ತು ನಶ್ಯ ಪುಡಿಯ ಮಿಶ್ರಣ, ಇಳಿಜಾರಲ್ಲಿ ಮತ್ತು ಕಡಿದಾದ ಏರಿನಲ್ಲಿ ಇಳಿಯಲು ಅಥವಾ ಯಾರನ್ನಾದರೂ ಮೇಲಕ್ಕೆ ಎಳೆದುಕೊಳ್ಳಲು ಸಹಾಯಕವಾಗುವ ಹಗ್ಗ, ಸಕ್ಕರೆ-ಉಪ್ಪು, ನಿಂಬೆಹಣ್ಣಿನ ರಸದ ಹದವಾದ ಮಿಶ್ರಣದ ಕುಡಿಯುವ ನೀರು ದೇಹದಿಂದ ಬೆವರಿನ ರೂಪದಲ್ಲಿ ಹೊರಹೋಗುವ ಲವಣಾಂಶದ ಕೊರತೆಯನ್ನು ಸರಿದೂಗಿಸುತ್ತದೆ. ರಾತ್ರಿ ಕಾಡಿನಲ್ಲಿ ತಂಗುವುದಿದ್ದಲ್ಲಿ, ಟಾರ್ಚ್, ಸ್ಲೀಪಿಂಗ್ ಬ್ಯಾಗ್, ವಾಟರ್ ಪ್ರೂಫ್ ಟೆಂಟ್ ಅಗತ್ಯವಾಗಿರುತ್ತದೆ. ಇವೆಲ್ಲ ಏನೇ ಇದ್ದರೂ ನಿಮ್ಮ ಲಗೇಜ್ ಕಡಿಮೆ ಇದ್ದಷ್ಟೂ ನಿಮ್ಮ ಚಾರಣ ಸರಳ, ಸುಲಲಿತ, ಸರಾಗ ಹಾಗೂ ಸಂತಸಮಯವಾಗಿರುತ್ತದೆ. ನಮ್ಮ ಅನುಕೂಲಕ್ಕೆ ಮಾಡಿಕೊಂಡ ವ್ಯವಸ್ಥೆಗಳೇ ಹಲಮೊಮ್ಮೆ ಅನನುಕೂಲಕ್ಕೆ ಕಾರಣವಾಗುತ್ತವೆ.

ಚಾರಣವನ್ನು ಬೆಳಿಗ್ಗೆ ಆರೇಳು ಗಂಟೆಗೇ ಪ್ರಾರಂಭಿಸುವುದು ಒಳ್ಳೆಯದು. ಚುಮುಚುಮು ಬೆಳಕಿನಲ್ಲಿ ನಿಮ್ಮ ಜೀವನದ ಅವಿಸ್ಮರಣೀಯ ಕ್ಷಣಗಳು ಸಂಭವಿಸುತ್ತವೆ. ಬೆಳಗಿನ ಉಪಹಾರ ಬಲವಾಗಿರಬೇಕು. ಮಧ್ಯಾಹ್ನಕ್ಕೆ ಉಪಾಹಾರ ಅಥವಾ ಊಟವನ್ನು ಪುಟ್ಟ ಪೊಟ್ಟಣಗಳಲ್ಲಿ ಅವರವರೇ ಹೊತ್ತೊಯ್ಯುವಂತೆ ಬೆಳಗಿನ ಉಪಾಹಾರದ ನಂತರ ವಿತರಿಸುವುದು ಒಳ್ಳೆಯದು. ಅವರಿಗೆ ಅಗತ್ಯವಾದಾಗ, ಹಸಿವಾದಾಗ ತಿನ್ನಲು, ಆಯಾಸ ಪರಿಹರಿಸಿಕೊಳ್ಳಲು ಬೇಕಾಗುತ್ತದೆ. ಕಿತ್ತಳೆ ಹಣ್ಣು, ಬಾಳೆ ಹಣ್ಣು, ಸೌತೆಕಾಯಿ, ಒಣ ಹಣ್ಣುಗಳು ಹಾದಿಯಲ್ಲಿ ನಡೆಯುತ್ತಾ ತಿನ್ನಲು ಒಳ್ಳೆಯದು. ಕುರುಕಲು ತಿಂಡಿಗಳು, ಕರಿದ ಪದಾರ್ಥಗಳು ಮತ್ತು ಕಾರ್ಬೋನೇಟೆಡ್ ತಂಪು ಪಾನೀಯಗಳು ಬೇಡವೇ ಬೇಡ. ಇವತ್ತು ನಾವು ಅಷ್ಟು ದೂರದಿಂದ ಬಂದಿರೋದ್ರಿಂದ ಈಗಾಗ್ಲೇ ಗಂಟೆ ಒಂಬತ್ತಾಗಿದೆ. ಮಧ್ಯಾಹ್ನ ಒಂದು ಗಂಟೆಯೊಳಗೆ ನಾವು ಮತ್ತೆ ಇಲ್ಲಿಗೇ ಬರೋದ್ರಿಂದ ಊಟ ಹೊತ್ಕೊಂಡ್ಹೋಗೋ ಪ್ರಶ್ನೆ ಇಲ್ಲ.

ಚಾರಣ ಪ್ರದೇಶದ ನಕಾಶೆಯನ್ನು ಒಮ್ಮೆ ಅವಲೋಕಿಸುವುದು ಸೂಕ್ತ. ಮಾರ್ಗದರ್ಶಕ, ಆಯೋಜಕರಿಬ್ಬರೂ ಕುಳಿತು, ನಕಾಶೆಯನ್ನು ಪರಿಶೀಲಿಸಿ ಕೆಲವು ಮುಖ್ಯ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಹೊರಡುವ ಸ್ಥಳ, ಸಮಯ, ಸಾಗುವ ಹಾದಿ, ನೀರಿನ ಮೂಲಗಳು, ಮಧ್ಯಾಹ್ನ ವಿಶ್ರಮಿಸುವ ಸ್ಥಳ, ಹತ್ತಿರದ ವಾಹನ ಮಾರ್ಗ, ತಲುಪುವ ಸ್ಥಳ, ಸಮಯ, ಇವೆಲ್ಲವನ್ನೂ ಚಾರಣದ ಪ್ರಾರಂಭದ ಸ್ವಪರಿಚಯ ಸಂದರ್ಭದಲ್ಲಿಯೇ ವಿವರವಾಗಿ ಭಾಗವಹಿಸುವ ಎಲ್ಲರಿಗೂ ಮನನ ಮಾಡಿಕೊಡಬೇಕು. ಗೈಡ್ ಹಾಗೂ ಟೀಂ ಮೇನೇಜರ್ ಬಳಿ ವಿಷಲ್‌ಗಳಿರಲೇಬೇಕು. ದಾರಿ ತಪ್ಪಿದಾಗ, ಎಲ್ಲರನ್ನೂ ಒಂದೆಡೆ ಸೇರಿಸಬೇಕಾದಾಗ, ಈ ವಿಷಲ್ ಬಹಳ ಉಪಯೊಗಕ್ಕೆ ಬರುತ್ತದೆ. ಗವಿ, ಸುರಂಗ ಪ್ರವೇಶಿಸುವುದಿದ್ದಲ್ಲಿ ಅಥವಾ ಸಂಜೆ ತಡವಾಗುವ ಸಂಭವವಿದ್ದಲ್ಲಿ ತಲೆಗೆ ಕಟ್ಟುವ ಎರಡು ಟಾರ್ಚ್ ಬೇಕಾಗುತ್ತದೆ. ಅಲ್ಲದೇ ಅಗತ್ಯ ಸಂದರ್ಭಗಳಲ್ಲಿ ಬಳಸಲು ಉದ್ದವಾದ ಎರಡು ಕತ್ತಿಗಳು ಜವಾಬ್ದಾರಿಯುತರ ಬಳಿಯಲ್ಲಿರುವುದು ಒಳಿತು. ತಂಡದ ಸದಸ್ಯರು ಬಳಸಿದ ನಂತರ ಉಳಿದ ಕವರ್‌ಗಳು, ಇನ್ನಿತರೆ ತ್ಯಾಜ್ಯಗಳನ್ನು ಒಂದು ಚೀಲದಲ್ಲಿ ಸಂಗ್ರಹಿಸಲು ವ್ಯವಸ್ಥೆಯಿರಲೇಬೇಕು. ಕಣ್ಣಿಗೆ ರಾಚುವಂಥ ಬಣ್ಣದ ಉಡುಪುಗಳನ್ನು ಬಳಸಲೇಬೇಡಿ. ಅವು ವನ್ಯಜೀವಿಗಳನ್ನು ಕೆರಳಿಸಬಹುದು.

ಕಾಡಿನಲ್ಲಿ ಕಿವಿಗೆ ಇಯರ್ ಫೋನುಗಳನ್ನು ಹಾಕಿಕೊಂಡು ಸಿನಿಮಾ ಹಾಡುಗಳನ್ನು ಕೇಳಬೇಡಿ. ಜಗತ್ತಿನ ಅದ್ಭುತ ಸಂಗೀತವಾದ ಕಾಡಿನ ಹಾಡನ್ನು ಕೇಳಿಸಿಕೊಳ್ಳುವ ಅಪೂರ್ವ ಅವಕಾಶವನ್ನು ಕಳೆದುಕೊಳ್ಳುತೀರಿ. ದುಂಬಿಗಳ ಝೇಂಕಾರ, ನೀರಿನ ಜುಳುಜುಳು ನಿನಾದ, ಕಾಡಿನ ಅರ್ಥಪೂರ್ಣ ಮೌನ, ಸುಳಿದಾಡುವ ತಂಗಾಳಿ, ಆಳೆತ್ತರದ ಹುಲ್ಲಿನ ತೊನೆದಾಟ, ಪಕ್ಷಿಗಳ ಕಲರವ, ಪ್ರಾಣಿಗಳ ಹೂಂಕಾರ, ಸರೀಸೃಪಗಳ ಸರಿದಾಟದ ಸರಪರ ಸದ್ದು, ಸದ್ದಿಲ್ಲದೆ ಹರಿದಾಡುವ ಇರುವೆ-ಗೆದ್ದಲುಗಳು, ನೀವು ಕಾಡಿಗೆ ಹೋಗಿ ಅಲೆದಾಡಿ ಬಂದದ್ದಕ್ಕೆ ಅರ್ಥ ಬರಬೇಕೆಂದರೆ ಇವೆಲ್ಲವನ್ನೂ ನೀವು ಗಮನಿಸಬೇಕು. ವಿನಾಕಾರಣ ಕೂಗುವುದು, ಗಿಡಗಳನ್ನು ಚಿವುಟುವುದು, ಮರಗಳನ್ನು ಗಾಯಗೊಳಿಸುವುದು ಮಾಡಲೇಬೇಡಿ. ಕಾಡುಪ್ರಾಣಿಗಳು ಎದುರಾದರೆ ಅವುಗಳನ್ನು ಕೆಣಕದೇ ದೂರದಿಂದಲೇ ಎಚ್ಚರಿಕೆಯಿಂದ ಗಮನಿಸಿ. ಪ್ರಾಣಿ, ಪಕ್ಷಿ, ಕೀಟಗಳನ್ನು ದೂರದಿಂದಲೇ ಗಮನಿಸಿ, ಹಿಡಿಯಲು ಹೋಗಲೇಬೇಡಿ. ನಿಮ್ಮಿಂದ ಅವಕ್ಕೆ ಅಥವಾ ಅವುಗಳಿಂದ ನಿಮಗೆ ಅಪಾಯವಾಗಬಹುದು. ತೊರೆಗಳ ಪಾತ್ರದಿಂದ ಕಲ್ಲುಗಳನ್ನು ಸಂಗ್ರಹಿಸಬೇಡಿ. ಪ್ರಕೃತಿಗೆ ಅದರದ್ದೇ ಆದ ನಿಯಮಗಳಿವೆ. ನೀರು ಕಟ್ಟಿ ನಿಲ್ಲಿಸಲು, ಕಲ್ಲುಗಳನ್ನು ರಾಶಿ ಹಾಕಲು ಪ್ರಯತ್ನಿಸಬೇಡಿ. ನೀವಲ್ಲಿಗೆ ಬಂದಿರುವುದು ನಿಮ್ಮ ಅರಿವನ್ನು ಹೆಚ್ಚಿಸಿಕೊಳ್ಳಲು ಎಂಬುದು ನೆನಪಿರಲಿ. ಚಾಕಲೇಟ್‌ನ ಸಿಪ್ಪೆಯಿಂದ ಹಿಡಿದು, ನಿಮ್ಮ ಹರಿದುಹೋದ ಬೂಟಿನವರೆಗೂ ಏನನ್ನೂ ಕಾಡಿನಲ್ಲಿ ಎಸೆಯಬೇಡಿ. ನಿಮಗೆ ಚೈತನ್ಯ ಹಾಗೂ ಸಂತೋಷ ನೀಡಿದ ಕಾಡಿಗೆ ದ್ರೋಹವೆಸಗಬೇಡಿ. ಅಪಾಯಕಾರೀ ಸಾಹಸಗಳನ್ನು ಮಾಡಲು ಹೋಗಬೇಡಿ. ಸಣ್ಣ ತಪ್ಪಾದರೂ ಕಾಡಿನಲ್ಲಿ ನಿಮಗೆ ಸಕಾಲದಲ್ಲಿ ಸರಿಯಾದ ಚಿಕಿತ್ಸೆ ಸಿಗಲಾರದು. ತಿಳೀತಾ? ಎಂದು ಒಂದು ಸಲ ದಪ್ಪವಾಗಿ ತಮ್ಮ ಕಣ್ಣುಬಿಟ್ಟರು.

ಎಷ್ಟು ದೂರ ನಡೆಯಬೇಕು, ಎಂಥ ಹಾದಿಯಲ್ಲಿ ನಡೆಯಬೇಕು, ಎಷ್ಟು ಹೊತ್ತಿಗೆ ಮುಗಿಸಿ ಹಿಂದಿರುಗಬೇಕು. ಕಾಡಿನಲ್ಲಿ ಹೇಗೆ ವರ್ತಿಸಬೇಕು ಎಂಬುದನ್ನೆಲ್ಲ ಮೋಹನ್‌ರಾಜ್ ಹಾಗೂ ಗೈಡ್ ಚಂದ್ರೇಗೌಡರು ಹೇಳಿದರು. ಈ ಚಂದ್ರೇಗೌಡರು ಔಷಧೀಯ ಸಸ್ಯಗಳ, ಅಪ್ಪುಸಸ್ಯಗಳ ಬಗೆಗೆ ಅಪೂರ್ವ ತಿಳುವಳಿಕೆಯಿರುವವರು. ಕೀಟ, ಪ್ರಾಣಿ-ಪಕ್ಷಿಗಳ ಬಗ್ಗೆ ಜ್ಞಾನ ಇರುವವರು, ಅರಣ್ಯಶಾಸ್ತ್ರದಲ್ಲಿ ಅನುಭವವಿರುವವರು, ಹಾಗೆಂದ ಮಾತ್ರಕ್ಕೆ ಅವರೇನೂ ಯೂನಿವರ್ಸಿಟಿಯಿಂದ ಬಂದವರಲ್ಲ, ಸ್ಥಳೀಯ ಪ್ರಜ್ಞಾವಂತರಾದ ಅವರಿದ್ದರೆ ಚಾರಣ ಒಂದು ಪದವಿಯಾನದಷ್ಟೇ ಅರ್ಥಪೂರ್ಣ. ತನ್ನೊಡನೆ ತನ್ನದೇ ವೇಗದಲ್ಲಿ ನಡೆಯುತಿದ್ದ ಒಂದಷ್ಟು ಜನ ಹುಡುಗ ಹುಡುಗಿಯರಿಗೆ, ಆಆಒಂದೂ ಒಂದೂ ಸೇರಿದರೆ ಎರಡೇ? ಅಥವಾ ಒಂದೇ? ಎಂದು ಚಂದ್ರೇಗೌಡರು ಕೇಳಿದ್ದಕ್ಕೆ ಇದ್ದಬದ್ದವರೆಲ್ಲಾ ಒಕ್ಕೊರಲಿನಿಂದ ಗಟ್ಟಿ ದನಿಯಲಿ ಎರಡೂ ಎಂದು ಕೂಗಿದರು. ಆಆಎಲ್ಲಿಂದಲೋ ಹರಿದು ಬಂದ ಎರಡು ತೊರೆಗಳು ಸೇರಿದರೆ ಒಂದು ತೊರೆಯೋ ಇಲ್ಲಾ ಎರಡೋ? ತಾರ್ಕಿಕ ಗಣಿತಕ್ಕಿಂತ ಸಹಜ ಕಲ್ಪನೆಯ ವಾಸ್ತವವೇ ಅಂತಿಮ ಸತ್ಯವೆನಿಸುತ್ತೆ. ಅಲ್ವಾ ಮಕ್ಕಳೇ? ಎಂದು ಮೀಸೆಯಡಿಯಲಿ ನಕ್ಕ ಚಂದ್ರೇಗೌಡರು, ಆಆನಿಮ್ಮ ಗಣಿತ ಪರೀಕ್ಷೇಲಿ ಮಾತ್ರ ಇದನ್ನೇ ಬರೀಬೇಡಿ, ಆಯ್ತಾ? ಎಂದು ಎಚ್ಚರಿಕೆಯನೂ ನೀಡಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248